


ಮಾರುಕಟ್ಟೆಯಲ್ಲಿ ಹೊಸವರ್ಷಕ್ಕೋ, ಯುಗಾದಿಗೋ ದೊರೆಯುವ ಕೆಲವು ಆಫರ್‌ಗಳು ಮನಸ್ಸಿಗೆ ಪಾಯಸದೂಟ ಹಾಕುತ್ತವೆ. ಖರೀದಿಸಿ ಮರುದಿನ ಬೇಡವೆಂದೆನಿಸಿದರೆ ಸರಿಯಾಗಿ ಅರ್ಧ ಬೆಲೆಗೆ ಮಾರಲೂ ತಯಾರಾಗಿರಬೇಕು. ಅರ್ಧ ಬೆಲೆಗಿಂತ ಹೆಚ್ಚು ಹೇಳಿದರೆ 'ಸೆಕೆಂಡ್‌ಹ್ಯಾಂಡ್' ವಸ್ತುಗಳಿಗೆ ಬೇಡಿಕೆ ಇಲ್ಲ. ಇದೇ ವಿಷಯ ಹಲವರ ಕೊರಗಿಗೆ ಕಾರಣವಾಗುತ್ತದೆ. ಹಲವರಲ್ಲಿ ಖಿನ್ನತೆಯೂ ಕಾಣಿಸಿಕೊಳ್ಳಬಹುದು.

ಏನು ಮಾಡಬಹುದು? ಹವ್ಯಾಸಿಯೇ ಆದರೂ ವೃತ್ತಿಪರನೇ ಆದರೂ, ಕ್ಯಾಮೆರಾದಂತಹ ಉಪಕರಣಗಳು ಆದಷ್ಟು 'ಮಿನಿಮಮ್' ಆಗಿರಬೇಕು. ಎರಡು ಕ್ಯಾಮೆರಾ, ಮೂರ್ನಾಲ್ಕು ಲೆನ್ಸ್‌ಗಳಿದ್ದರೆ ವೃತ್ತಿಪರ ಛಾಯಾಗ್ರಾಹಕನಿಗೂ ಸಾಕು. ಇತ್ತೀಚೆಗೆ ಮಾರುಕಟ್ಟೆಯಲ್ಲಿರುವ 'ಮಿರರ್‌ಲೆಸ್' ಮಾದರಿಯ ಕ್ಯಾಮೆರಾಗಳು ಗಾತ್ರದಲ್ಲೂ ಪುಟ್ಟದಾಗಿದ್ದು, ಡಿಎಸ್‌ಎಲ್‌ಆರ್ ಕ್ಯಾಮೆರಾಗಳಂತೆಯೇ ಗುಣಮಟ್ಟ ಹೊಂದಿರುತ್ತವೆ. ಹವ್ಯಾಸಿಗಳು ಹೆಚ್ಚೆಚ್ಚು ಇವುಗಳ ಕಡೆಗೆ ಬರುತ್ತಿದ್ದಾರೆ. ದಿನನಿತ್ಯದ ಚಿತ್ರೀಕರಣಗಳಿಗೆ ಐಫೋನ್ ಬಳಸುವಾತನೂ ಮನೆಯಲ್ಲಿ ಒಂದೆರಡು ಕ್ಯಾಮೆರಾ ಹೊಂದಿರುತ್ತಾನೆ.

ಕ್ಯಾಮೆರಾ ಕೊಳ್ಳುವಾಗ ಜೊತೆಯಲ್ಲಿ ಬರುವ 'ಕಿಟ್ ಲೆನ್ಸ್'ಗಳು ಸಾಮಾನ್ಯ ಸಂದರ್ಭಗಳಲ್ಲಿ ಚಿತ್ರೀಕರಣ ನಡೆಸುವುದಕ್ಕೆ ಸಾಕಾಗುತ್ತವೆ. ವಿಶೇಷ ರೀತಿಯ ಚಿತ್ರಗಳಿಗಾಗಿ 'ಪ್ರೈಮ್' ಲೆನ್ಸ್‌ಗಳನ್ನು ಬಳಸಬಹುದು. ವನ್ಯಮೃಗ ಛಾಯಾಗ್ರಹಣದಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ದೊಡ್ಡ ಗಾತ್ರದ ಟೆಲಿ ಲೆನ್ಸ್‌ಗಳ ಬಳಕೆಯಾಗುತ್ತದೆ.

ಈ ಗ್ಯಾಸ್‌ನ ನಿಜವಾದ ತೊಂದರೆ ಏನು? ಮೂಲೆಯಲ್ಲಿ ರಿಸಿದ ನಿರುಪಯುಕ್ತ ಕ್ಯಾಮೆರಾಗಳು/ ಲೆನ್ಸ್‌ಗಳು ಮತ್ತು ಕಷ್ಟದಲ್ಲಿ ನಡೆಯುತ್ತಿರುವ ಬ್ಯಾಂಕ್ ಖಾತೆಗಳು. ನಿಜವಾಗಿಯೂ ಒಂದು ಉತ್ತಮವಾದ ಆದಾಯದ ಮೂಲವಿಲ್ಲದೇ ಇದ್ದಲ್ಲಿ ಈ ಗ್ಯಾಸ್ ಯಾರನ್ನೇ ಆದರೂ 'ಪಾಪರ್' ಮಾಡಿಬಿಡಬಹುದು. ಕಂಪೆನಿಗಳು ಆಗಾಗ ಹೊಸ ಉಪಕರಣಗಳನ್ನು ಬಿಡುಗಡೆ ಮಾಡುತ್ತಿರುತ್ತವೆ. ನಮಗೆ ಅದು ನಿಜವಾಗಿಯೂ ಉಪಯುಕ್ತವೇ ಎಂದು ನಮಗೆ ನಾವೇ ಪ್ರಶ್ನಿಸದೇ ಕೊಳ್ಳುತ್ತ ಹೋದರೆ ಗ್ಯಾಸ್ ನಮ್ಮನ್ನೇ ಆವರಿಸಿಕೊಳ್ಳಬಹುದು.

